**ಇಂದು ದಿನಾಂಕ: 29.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಜಿ.ಸಿ.ಜಿ ವಕೀಲರಿಂದಃ**

ನಾನು 2 ನೇ ತರಗತಿ ಓದಿದ್ದೇನೆ. ಕನ್ನಡ ಓದು ಬರಹ ಗೊತ್ತಿದೆಯೆ ಎಂದರೆ 5–6 ವರ್ಷಗಳಿಂದ ಸಣ್ಣ ಅಕ್ಷರಗಳು ಕಾಣುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಗೊತ್ತಿದೆ. 2013 ರಲ್ಲಿ ಕಾಳಮರಿಗೌಡರು ಸ.ನಂ.35 ರಲ್ಲಿ 28 ಗುಂಟೆ ಸ.ನಂ.39 ರಲ್ಲಿ 1 ಎಕರೆ 1 ಗುಂಟೆ ಬರೆದುಕೊಟ್ಟಿದ್ದಾರೆ. ಸದರಿ ಆಸ್ತಿಗಳು ಕಾಳಮರಿಗೌಡರಿಗೆ ಸಾಗುವಳಿ ಮೂಲಕ ಬಂದಿರುತ್ತವೆ. ಸಾಕ್ಷಿಯು ಸ್ವತಃ ಹೇಳುವುದೇನಂದರೆ ಮೂಲತಃ ಅವುಗಳು ನನ್ನ ಆಸ್ತಿ. ಆ ಆಸ್ತಿಗಳು ನನ್ನ ಆಸ್ತಿ ಎಂದು ತೋರಿಸಲು ರಿಜಿಸ್ಟರ್ ಪತ್ರ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ರಿಜಿಸ್ಟರ್ ಪತ್ರವನ್ನು ಯಾರಿಂದ ತೆಗೆದುಕೊಂಡಿದ್ದೀರಿ ಎಂದರೆ ನಮ್ಮ ತಂದೆ ತೆಗೆದುಕೊಂಡಿದ್ದರು. ಆ ಸಂಬಂಧ ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿಲ್ಲ. 2002 ರಲ್ಲಿ ಸರ್ಕಾರ ಸಾಗುವಳಿ ಮೂಲಕ ಕಾಳಮರಿಗೌಡರಿಗೆ ಹಕ್ಕು ಕೊಟ್ಟಿದ್ದಾರೆ ಎಂದರೆ ಸರಿ. ಸಾಗುವಳಿ ಚೀಟಿ ಮೇರೆಗೆ ಎಂ.ಆರ್ 10/2002–03 ರಂತೆ ಕಾಳಮರೀಗೌಡರಿಗೆ ಖಾತೆಯಾಗಿತ್ತು ಎಂದರೆ ಸರಿ. ಮಾನ್ಯ ಉಚ್ಚನ್ಯಾಯಾಲಯದ W.P No.25130/2000–01 ರಲ್ಲಿ ಮಾಡಿರುವ ಆದೇಶದ ಪ್ರಕಾರ ಕಾಳಮರೀಗೌಡರಿಗೆ 3 ಎಕರೆ 35 ಗುಂಟೆ ಬಂದಿತ್ತು ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುವುದೆಂದರೆ ಅದಾದ ನಂತರ ಅದನ್ನು 2013 ರಲ್ಲಿ ಬರೆದುಕೊಟ್ಟಿದ್ದಾರೆ. ಸಾಗುವಳಿ ಚೀಟಿಯ ಆಧಾರದ ಮೇಲೆ ದಾವಾ ಆಸ್ತಿ ಸೇರಿದಂತೆ ಒಟ್ಟು 3 ಎಕರೆ 35 ಗುಂಟೆ ವಿಸ್ತೀರ್ಣದಲ್ಲಿ ಕಾಳಮರೀಗೌಡರು ಹಕ್ಕು ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿ. 2013 ರಲ್ಲಿ ಕಾಳಮರೀಗೌಡರು ನನಗೆ ಛಾಪಾ ಕಾಗದದ ಮೇಲೆ ಬರೆದುಕೊಟ್ಟಿದ್ದಾರೆ. ಛಾಪಾ ಕಾಗದವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಕಾಳಮರೀಗೌಡರ ಹೆಂಡತಿಯ ಹೆಸರು ಯಶೋಧಮ್ಮ. ಅವರಿಗೆ 5 ಜನ ಮಕ್ಕಳು ಅವರ ಹೆಸರು ಗೊತ್ತಿಲ್ಲ. ನನಗೆ ಬರೆದುಕೊಟ್ಟಿರುವ ನೊಂದಣಿಯಾಗಿಲ್ಲ ಎಂದರೆ ಸರಿ. ನನಗೆ ಬರೆದುಕೊಟ್ಟಿರುವ ಪತ್ರದಲ್ಲಿ ಯಶೋಧಮ್ಮ ಮತ್ತು ಅವರ ಮಕ್ಕಳ ಸಹಿ ತೆಗೆದುಕೊಂಡಿಲ್ಲ. ನಿ.ಪಿ–7 ರ ಪ್ರಕಾರ ಮೂಲ ಖಾತೆದಾರರಾದ

ಕಾಳಮರಿ ಬಿನ್ ಸಣ್ಣೇಗೌಡ ಇವರಿಗೆ ಮಕ್ಕಳಿಲ್ಲವಾದ್ದರಿಂದ ಇವರ ಪತ್ನಿ ಕಾಳಮ್ಮ ಸ್ವತಃ ಛಾಪಾ ಕಾಗದದ ಮೇಲೆ ಒಪ್ಪಿಗೆ ಪತ್ರ ಬರೆದು ಸ.ನಂ.35 ರಲ್ಲಿ 28 ಗುಂಟೆ ಸ.ನಂ.39 ರಲ್ಲಿ 1 ಎಕರೆ 1 ಗುಂಟೆ ಖಾತೆಯನ್ನು ಅಣ್ಣನಾದ ಕರೀಗೌಡರ ಏಕೈಕ ಪುತ್ರನಾದ ಎಂ.ಕೆ.ಮಲ್ಲೇಶರವರ ಹೆಸರಿಗೆ ಖಾತೆ ನೀಡಲು ಸಮ್ಮತಿಸಿದ ಮೇರೆಗೆ ಖಾತೆಗೆ ಅಂಗೀಕರಿಸಿದೆ ಎಂದು ಬರೆದಿದ್ದಾರೆ ಎಂದರೆ ಸರಿ. ನೊಂದಣಿಯಿಲ್ಲದ ಒಪ್ಪಿಗೆ ಪತ್ರವನ್ನು ಸೃಷ್ಟಿ ಮಾಡಿ ನಾನೇ ರೆವಿನ್ಯೂ ಅಧಿಕಾರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಕಾಳಮರಿಗೌಡ ನನ್ನ ಸಹೋದರ ಎಂದರೆ ಅವರು ನನ್ನ ಅತ್ತೆಯ ಅಳಿಯ. ನಾವು 7 ಜನ ಅಣ್ಣತಮ್ಮಂದಿರು. ನನ್ನ ತಂದೆಯ ಹೆಸರು ಹೆಚ್.ಎಂ.ಕರಿಯಪ್ಪ. ವಾದಿಯ ಹೆಸರಿನಲ್ಲಿದ್ದ ಖಾತೆಗೆ ದಿನಾಂಕ 01.04.2005 ರಂದು ದಾಖಲೆಯನ್ನು ಸೃಷ್ಟಿಸಿ ನನ್ನ ಹೆಸರಿಗೆ ಸುಳ್ಳು ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ಸೇರಿರುವ ಆಸ್ತಿಗೆ 2005 ರಲ್ಲಿ ಮೋಸದಿಂದ ಖಾತೆ ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ನಾನು ಖಾತೆ ಮಾಡಿಸಿಕೊಂಡಿರುವ ಸಂಬಂಧ ಉಪವಿಭಾಗಾಧಿಕಾರಿಯವರ ಮುಂದೆ RA No. 87/2017 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸುಳ್ಳು. ಸದರಿ ಮೇಲ್ಮನವಿಯಲ್ಲಿ ಎಂ.ಆರ್ ನಂಬರ್ 34/2004-05 ಮಾಡಿರುವ ಆದೇಶವನ್ನು ರದ್ದುಪಡಿಸಿ ಖಾತೆಯನ್ನು ವಾದಿಯ ಹೆಸರಿಗೆ ನೀಡುವಂತೆ ತಹಶೀಲ್ದಾರರಿಗೆ ಆದೇಶಿಸಲಾಗಿತ್ತು ಎಂದರೆ ಸುಳ್ಳು. ಸದರಿ ಆದೇಶದ ಪ್ರಕಾರ ತಹಶೀಲ್ದಾರರು ಎಂ.ಆರ್ ನಂಬರ್ 13/2018-19 ಮತ್ತು 14/2018-19 ರಂತೆ ವಾದಿಯ ಹೆಸರಿಗೆ ಖಾತೆ ಇಟ್ಟಿದ್ದಾರೆ ಎಂದರೆ ಸುಳ್ಳು. ಉಪವಿಭಾಗಾಧಿಕಾರಿಯವರ ಆದೇಶವನ್ನು ನಾನು ಓದಿಲ್ಲ ಮತ್ತು ತಿಳಿದುಕೊಂಡಿಲ್ಲ. ಉಪವಿಭಾಗಾಧಿಕಾರಿರವರ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ. 2018 ರಿಂದ ಇದುವರೆಗೂ ದಾವಾ ಆಸ್ತಿಯ ಖಾತೆ ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ನಾನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವ ಸಂಬಂಧ ವಾದಿ 2017 ರಲ್ಲಿ ಪಿರಿಯಾಪಟ್ಟಣದ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಸುಳ್ಳು. ನನ್ನ ಮಗ ಮತ್ತು ನನ್ನ ಸಹೋದರ ಪೊಲೀಸ್ ಎಂದರೆ ಸರಿ. ವಾದಿ ಕೊಟ್ಟಿದ್ದ ದೂರನ್ನು ಪೊಲೀಸ್ ಠಾಣೆಯಲ್ಲಿ ಮುಚ್ಚಿ ಹಾಕಿಸಿದ್ದೇನೆ ಎಂದರೆ ಸುಳ್ಳು. ವಾದಿ ಪಿರಿಯಾಪಟ್ಟಣದ ಸಿವಿಲ್

ನ್ಯಾಯಾಲಯದಲ್ಲಿ ನನ್ನ ವಿರುದ್ಧ ಖಾಸಗಿ ಕ್ರಿಮಿನಲ್ ದೂರು ಸಲ್ಲಿಸಿದ ಮೇರೆಗೆ ದೂರು ದಾಖಲಾಗಿತ್ತು ಎಂದರೆ ಸುಳ್ಳು. ಅಸಲು ದಾವಾ ಸಂಖ್ಯೆ 246/2008 ಮತ್ತು ಆರ್ ಎ ನಂಬರ್ 48/2013 ರ ಮೇಲ್ಮನವಿಯಲ್ಲಿ ವಾದಿ ಅಥವಾ ಅವರ ಕುಟುಂಬಸ್ಥರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ವಾದಿಗೆ ಸೇರಿದ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಒಳಗೊಂಡಂತೆ ಮಾಗಡಿ ಗ್ರಾಮದ ಕರೀಗೌಡ ಬಿನ್ ಮಲ್ಲೇಗೌಡರವರ 5 ಸರ್ವೆ ನಂಬರ್ ಗಳ ಸಂಬಂಧ ಅವರನ್ನು ಪಕ್ಷಗಾರರನ್ನಾಗಿ ಮಾಡದೇ ದಾವೆ ಸಲ್ಲಿಸಿ ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸುಳ್ಳು. ನಾನು ಮೋಸದಿಂದ ಡಿಕ್ರಿ ಪಡೆದುಕೊಂಡಿರುವುದಾಗಿ ವಾದಿಗಳು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದರೆ ಸುಳ್ಳು. ಪೂರ್ವಕ್ಕೆ ಸರ್ಕಾರಿ ಕಟ್ಟೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ತಾಯಮ್ಮ ಮತ್ತು ಮಲ್ಲೇಗೌಡರ ಜಮೀನು ಮತ್ತು ದಕ್ಷಿಣಕ್ಕೆ ಮಣಿಕಂಠ ಮತ್ತು ಮಹೇಶರವರ ಜಮೀನು ಈ ಚೆಕ್ಕುಬಂಧಿ ಒಳಗೆ ಇರುವ ಜಮೀನಿಗೆ ಸಂಬಂಧಪಟ್ಟಂತೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ. ಒಪ್ಪಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಒಪ್ಪಿಗೆ ಪತ್ರದಲ್ಲಿ ವಾದಿಯ ಸಹಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ.

**ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**